‘ಅದೇ ಕಣಣ್ಣ... ಹನಿರತ್ನ ಕುರುಕ್ಷೇತ್ರದ ಬಗ್ಗೆ ಒಂದು ನ್ಯಾಷನಲ್ ಲೆವೆಲ್ ಸೆಮಿನಾರ್ ಮಾಡೋಣ. ಅದರ ಇನಾಗರೇಷನ್ ಚೀಫ್ ಮಿನಿಸ್ಟ್ರಿಂದ ಮಾಡ್ಸೋಣ. ಯೂನಿವರ್ಸಿಟಿಗಳಿಂದ ಮಾತಾಡೋಕೆ ಜನ ಬರ್ಬೇಕು. ದೊಡ್ಡ ದೊಡ್ಡ ರೈಟರ್ಸ್‌ಗಳನ್ನ ಕರೀಬೇಕು...’

‘ಐಡಿಯಾ ಸೂಪರ್ರು. ಹಾಂ, ಇನಾಗರೇಷನ್‌ಗೆ ಯತ್ನಾಳ್ ಸಾಹೇಬರೂ ಇರಲಿ...’

‘ಆಯ್ತಣ್ಣ. ಅಂಗೇ ಆ ಸೀಟಿಯಣ್ಣ, ಕುಮಾರಣ್ಣ, ಸಿದ್ಧಣ್ಣ, ರಾಮಲುಣ್ಣ, ಆಮೇಲೆ ಅವರು... ಅದೇ ತುಂಬಾ ಜೋಕ್ ಮಾಡ್ತಾರಲ್ಲ ಆ ಅನಂತ್ಕುಮಾರು...’

‘ಈಶ್ವರಪ್ಪನೋರೂ ಇರಲಿ, ಅವರ ಸೌಂಡು ಸಖತ್ತಾಗೈತೆ...’

‘ನೋಡಣ್ಣ, ಈ ಸೆಮಿನಾರೊಂದು ಚೆನ್ನಾಗಿ ಆಗಿಬಿಟ್ಟು, ಅದರ ಬಗ್ಗೆ ಮೀಡಿಯಾ ಕವರೇಜ್ ಸರಿಯಾಗಿ ಆಗಿಬಿಟ್ರೆ, ಎಲ್ಲಾ ಕಡೆ ಕುರುಕ್ಷೇತ್ರದ್ದೇ... ಅಲ್ಲಲ್ಲ... ಹನಿರತ್ನ ಕುರುಕ್ಷೇತ್ರದ್ದೇ ಹವಾ... ಹಾಂ, ಸೆಮಿನಾರ್ ಕೊನೇಗೆ ಕನ್ನಡ ಫಿಲ್ಮ್ ಇಂಡಸ್ಟ್ರೀ ಕಡೆಯಿಂದ ಹಾಗೂ ಹನಿರತ್ನ ಅಭಿಮಾನಿಗಳ ವತಿಯಿಂದ ನಿಮಗೊಂದು ದೊಡ್ಡ ಸನ್ಮಾನ. ಆ್ಯಪಲ್ ಹಾರ, ಕ್ರೇನು ಆರೇಂಜ್ ಮಾಡಿಬಿಡೋಣ. ಜೊತೆಗೊಂದು ಬಿರುದು, ಬೆಳ್ಳಿಗದೆಯೂ ಇರಬೇಕು...’

‘ಸರಿ ತಮ್ಮ, ಒಳ್ಳೆ ಐಡಿಯಾ ಕೊಟ್ಟಿದ್ದಕ್ಕೆ ಥ್ಯಾಂಕ್ಸ್ ಕಣಪ್ಪ.’

‘ಅಣ್ಣೋ, ನಿಮ್ಮದು ಹೊಸ ಪ್ರಾಜೆಕ್ಟ್ ಎಲ್ಲಿಗೆ ಬಂತು?‘

‘ಅದನ್ನು ಥ್ರೀಡಿ ಬೇಡ, ಫೈವ್ ಡೀಲಿ ಮಾಡೋಣ ಬಿಡು. ಜೋಡೆತ್ತುಗಳನ್ನ ಹೀರೊ ಮಾಡಿಬಿಡೋಣ. ಆ ಸಿನಿಮಾಕ್ಕೆ ನೀನು ರೈಟರ್ ಮಾತ್ರ ಅಲ್ಲ, ಡೈರೆಕ್ಷನ್ನೂ ಮಾಡಬೇಕು...’

‘ಥ್ಯಾಂಕ್ಸ್ ಕಣಣ್ಣ...’

‘ಸರಿ, ಸಂಜೆ ಹೊತ್ತಿಗೆ ಮನೆ ಕಡೆಗೆ ಬಾ. ಸೆಮಿನಾರ್ ಸ್ಕ್ರಿಪ್ಟ್ ಫೈನಲೈಸ್ ಮಾಡಿಬಿಡೋಣ. ಹಾಂ, ನಮ್ಮ ಡೈರೆಕ್ಟ್ರನ್ನೂ ಕರಕೊಂಡು ಬಾ. ಆಮೇಲೆ ನನ್ನ ಬಿಟ್ಟು ಎಲ್ಲಾ ಮಾಡಿದ್ರು ಅಂತ ಆಯಪ್ಪ ಮುನಿಸಿಕೊಂಡ್ರೆ ನಂ ಸೆಮಿನಾರಿಗೆ ರಾಂಗ್ ಪಬ್ಲಿಸಿಟಿ ಆಗ್ಬಿಡುತ್ತೆ...’

ಕಾಲ್ ಕಟ್ ಮಾಡಿದ ಸಾಹೇಬರು ತಮ್ಮ ಸೆಮಿನಾರ್ ಐಡಿಯಾವನ್ನು ಭಾಮೈದನೊಂದಿಗೆ ಹಂಚಿಕೊಳ್ಳಲು ಫೋನ್ ಮಾಡಿದರು. ಅತ್ತ ಕಡೆಯಿಂದಲೂ ಕೆಮ್ಮು.

‘ಛೀ, ಮತ್ತೆ ಅಪಶಕುನ’ ಎಂದು ಮುಖ ಸಿಂಡರಿಸಿಕೊಳ್ಳುವಷ್ಟರಲ್ಲಿ, ಅತ್ತ ಕಡೆಯಿಂದ ‘ಹಲೋ’ ಶಬ್ದ ಕೇಳಿಸಿತು.

ಏಪ್ರಿಲ್ 1ರ ‘ನಗೆದಿನ’ದ
ಹಿನ್ನೆಲೆಯಲ್ಲಿನ ಕಾಲ್ಪನಿಕ ರಚನೆ

ಪ್ರತಿಕ್ರಿಯಿಸಿ: **feedback@sudha.co.in**

